ಅಸಲು ದಾವೆ ಸಂಖ್ಯೆ -288/2013
ಪಿ.ಡಬ್ಲ್ಯೂ - 01
ದಿನಾಂಕ: 07-08-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಎಸ್ ಕೆ ವಕೀಲರಿಂದ**

ವಾದಿಯು ಯಾವಾಗ ಮರಣ ಹೊಂದಿದ್ದಾರೆ ಎಂದರೆ 6 ವರ್ಷದ ಹಿಂದೆ. ಅದಕ್ಕಿಂತ ಪೂರ್ವದಲ್ಲಿ ಅವರು ಆರೋಗ್ಯವಾಗಿ ಇದ್ದರು ಎಂದರೆ ಸರಿ. ದಾವಾ ಆಸ್ತಿಯ ಉದ್ದ ಮತ್ತು ಅಗಲ ಎಷ್ಟು ಇದೆ ಎಂದರೆ ನನಗೆ ಗೊತ್ತಿಲ್ಲ. ಆದರೆ 2 1/2 ಗುಂಟೆ ಇದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಗೆ ಪುರಸಭೆ ಕಾರ್ಯಾಲಯದಲ್ಲಿ ಆಸ್ತಿ ನಂಬರ ಮತ್ತು ಉತಾರ ಇದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿ ನಂಬರಿಗೆ 503/3 ಉತಾರ ಇದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ- 3 ನ್ನು ತೋರಿಸಿದ್ದು ಇದು ಸದರಿ ದಾವಾ ಆಸ್ತಿಯ ಮುನ್ಸಪಲ್ ಉತಾರ ಇರುತ್ತದೆ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಮನೆ ಇರುವ ವಿಸ್ತೀರ್ಣ ಎಷ್ಟು ಎಂದರೆ ಮನೆ ಇಲ್ಲ ಅದು ಖುಲ್ಲಾ ಜಾಗೆ ಇರುತ್ತದೆ. ದಾವಾ ಸಲ್ಲಿಸುವುದಕ್ಕಿಂತ ಮುಂಚೆ ನೀವು ಪುರಸಭೆ ಕಾರ್ಯಾಲಯ ಸವಣೂರಗೆ ಹೋಗಿದ್ದೀರಾ ಎಂದರೆ ಹೋಗಿದ್ದೇವು ಎಂದು ನುಡಿಯುತ್ತಾರೆ. ಮುಂದುವರೆದು ತಹಶೀಲ್ದಾರ ಕಚೇರಿಗೆ ಹೋಗಿದ್ದೆವು ಅಲ್ಲಿ ಉತಾರವನ್ನು ತೆಗೆಯಿಸಿ ಹೆಸರನ್ನು ನೋಡಿದಾಗ ಅದನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಸದರಿ ಪರಡಿ 19 ಉತಾರದಲ್ಲಿ 2 1/2 ಗುಂಟೆ ಅಂತಾ ತೋರಿಸಲು ಅದರಲ್ಲಿ ನಮೂದು ಆಗಿರುವುದಿಲ್ಲ ಎಂದರೆ ನನ್ನ ಕಾಕಾನ ಮಕ್ಕಳು 2 1/2 ಗುಂಟೆ ನಮಗೆ ನೀಡಿರುತ್ತಾರೆ. ಈ ವಿಷಯವಾಗಿ ಯಾವುದಾದರೂ ದಾಖಲೆ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಅದನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ನೀವು ನಿಪಿ- 4 ಮತ್ತು 5 ನ್ನು ಸೃಷ್ಟಿಮಾಡಿಕೊಂಡು ಹಾಜರುಡಿಸಿದ್ದೀರಿ ಮತ್ತು ಅದರಲ್ಲಿ ಯಾವುದೇ ಇಸವಿಗಳು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯವರ ಹಿಸ್ಸೆಕ್ಕೆ ಪಾಲು ವಿಭಾಗದಲ್ಲಿ 2 ಗುಂಟೆ ಜಮೀನು ಮಾತ್ರ ಬಂದಿತ್ತು ಎಂದರೆ 2 1/2 ಗುಂಟೆ ಬಂದಿತ್ತು ಎಂದು ನುಡಿಯುತ್ತಾರೆ. ಸದರಿ 2 ಗುಂಟೆ ಜಮೀನನ್ನು ನಿಮ್ಮ ತಂದೆಯವರು 1 ನೇ ಪ್ರತಿವಾದಿಗೆ ಹಿಬಾ ಮುಖಾಂತರ ದಿ: 22-02-2000 ನೇ ಇಸವಿಯಲ್ಲಿ ಬರೆದುಕೊಟ್ಟು ಕಬ್ಜಾ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ತಹಶೀಲ್ದಾರ ಕಚೇರಿಯಲ್ಲಿ ದಿ: 20-05-2000 ಇಸವಿಯಂದು ಮ್ಯೂಟೇಶನ ನಂ. 9455 ಆಗಿರುತ್ತದೆ ಎಂದರೆ ಸರಿಯಲ್ಲ.

ಸದರಿ ಮ್ಯೂಟೇಶನ ನಂ. ನಿಡಿ-1 ರ ಎರಡನೆ ಪೂಟದಲ್ಲಿ ನಮೂದು ಆಗಿರುತದೆ ಎಂದರೆ ನನಗೆ ಓದಲು ಬರುವುದಿಲ್ಲ. ಸದರಿ ಡ  ನಂಬರನ್ನು ಬೇರೆ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇವೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪುರಸಬೆ ಕಾರ್ಯಾಲಯದಲ್ಲಿ ಒಂದು ಠರಾವು ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ.  ಸದರಿ ಠರಾವನ್ನು  ಸಹ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸದರಿ ಠರಾವನ್ನು ಈ ದಾವೆಯಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ.  ಸದರಿ ಠರಾವು ನಂಬರ 3(18) ಇರುತ್ತದೆ ಎಂದರೆ ಸರಿಯಲ್ಲ. ನೀವು ನಿಮ್ಮ ವಾದ ಪತ್ರದಲ್ಲಿ ಪ್ರತಿವಾದಿ ಮತ್ತು ತಹಶೀಲ್ದಾರವರು ಕೂಡಿಕೊಂಡು ಖೊಟ್ಟಿ ದಾಖಲೆಯನ್ನು ಸೃಷ್ಠಿಸಿದ್ದಾರೆ ಎಂದು ನುಡಿದಿದ್ದು ಸದರಿ ಖೊಟ್ಟಿ ದಾಖಲೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆ ಖೊಟ್ಟಿ ದಾಖಲೆ ಯಾವುದು ಎಂದರೆ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿಗೆ ನಿಡಿ- 9 ನ್ನು ತೋರಿಸಿ ಸದರಿ ದಾಖಲೆಯನ್ನು ನಿಮ್ಮ ತಂದೆಯವರು ಬರೆದುಕೊಟ್ಟಿರುತ್ತಾರೆ ಮತ್ತು ಅದರಲ್ಲಿ ನಿಮ್ಮ ತಂದೆಯವರ ಹೆಬ್ಬಟ್ಟಿನ ಗುರುತು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ- 1 ನ್ನು ತೋರಿಸಿದು  ಸದರಿ ದಾಖಲೆಯನ್ನು ನಿಮ್ಮ ತಂದೆಯವರು ನಿಮಗೆ ದಾವೆಯನ್ನು ನಡೆಸಲು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಅದರಲ್ಲಿ ಎರಡು  ಪುಟದಲ್ಲೂ ಅವರ ಹೆಬ್ಬಟ್ಟಿನ ಗುರುತುಗಳು ಇವೆ ಎಂದರೆ ಸರಿ. ದಾವಾ ಆಸ್ತಿಯ ನಂಬರ ಹೇಳಲು ಆಗುತ್ತದೆಯಾ ಎಂದರೆ 19/2 ಇದೆ. ಸದರಿ ನಿಪಿ- 1 ನ್ನು ಕೇವಲ ಪರಡಿ ನಂ. 19 ಕ್ಕೆ ಮಾತ್ರ ಬರೆದುಕೊಟ್ಟಿದ್ದು 19/2 ಕ್ಕೆ ಇರುವುದಿಲ್ಲ ಎಂದರೆ ಸರಿಯಲ್ಲ.

ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ನೊಂದಣಿಯಾಗದೇ ಇರುವುದರಿಂದ ಅದನ್ನು ಗುರುತಿಸಲಾಗಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

OS No. 288/2013 PW.1